**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಆರ್.ಎ.ಸಂಖ್ಯೆಃ 25/2013 ಜೊತೆಗೆ 34/2013</u>**

ದಿನಾಂಕಃ 20.09.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ವಾ.ಸಾ. - 1

**<u>ಪಾಟೀ ಸವಾಲುಃ ಎದುರುದಾರರ ಸಂಖ್ಯೆ 3 ರಿಂದ 6 ರವರ ಪರ ಶ್ರೀ. ಎಸ್.ಎನ್ ವಕೀಲರಿಂದಃ</u>**

ನಾನು ಕೆ.ಎಸ್.ಆರ್.ಟಿ.ಸಿ ಯಲ್ಲಿ ಕಿರಿಯ ಸಹಾಯಕನಾಗಿ ನಿವೃತ್ತಿ ಹೊಂದಿರುತ್ತೇನೆ. ನಾನು ದಾವಾ ಸ್ವತ್ತು ಕೊಂಡಾಗ ಕೆ.ಎಸ್.ಆರ್.ಟಿ.ಸಿ ಯಲ್ಲಿ ತಾಂತ್ರಿಕ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ಆ ಸಮಯಕ್ಕೆ ನಾನು ಚನ್ನಪಟ್ಟಣದಲ್ಲಿ ವಾಸ ಇದ್ದೆ. ನಾನು ಆ ಸಮಯಕ್ಕೆ ಚನ್ನಪಟ್ಟಣದಲ್ಲಿ ವಾಸ ಇದ್ದೆ ಎನ್ನುವ ಬಗ್ಗೆ ದಾಖಲೆ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಚನ್ನಪಟ್ಟಣದಲ್ಲಿ ಬೋಗ್ಯಕ್ಕೆ ಇದ್ದ ಮನೆ ಸಂಖ್ಯೆ 2221, 2 ನೇ ಅಡ್ಡ ರಸ್ತೆ, ಕುವೆಂಪು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆಗಿತ್ತು.

ನಾನು ಈಗ ಸುಮಾರು 15 ವರ್ಷಗಳಿಂದ ಅಲ್ಲಿಯೇ ಪಕ್ಕದಲ್ಲಿ 2218 ರ ಸಂಖ್ಯೆ ಮನೆಯಲ್ಲಿ ಇದ್ದೇನೆ. ನನ್ನ ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ಬರೆದಿರುವ 2221/1 ನಾನು ದಾವಾ ಕಾಲಕ್ಕೆ ಇದ್ದ ಮನೆ ಇರುತ್ತದೆ. ನಾನು ಉದ್ದೇಶ ಪೂರ್ವಕವಾಗಿ ನನ್ನ ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ಹೊಸ ವಿಳಾಸ ತೋರಿಸದೆ ಹಳೆ ವಿಳಾಸ ತೋರಿಸಿದ್ದೇನೆ ಎನ್ನುವುದು ಸರಿ ಅಲ್ಲ.

ನಾನು ಮೃತ ಯಶೋಧಮ್ಮನಿಗೆ ಮತ್ತು ಅವರ ಮಗ ಮೃತ ಶ್ರೀನಿವಾಸ ಮೂರ್ತಿಗೆ ಸಂಬಂಧಿ ಅಲ್ಲ. ನನ್ನ ಮತ್ತು ಮೃತ ಯಶೋಧಮ್ಮನ ಜಾತಿ ಬೇರೆ ಬೇರೆ ಎನ್ನುವುದು ಸರಿ ಇದೆ. ನಾನು ಒಕ್ಕಲಿಗರು ಆಗಿದ್ದು ಮೃತ ಯಶೋಧಮ್ಮ ಜಾತಿ ನಿಖರವಾಗಿ ಗೊತ್ತಿಲ್ಲ. ಮೃತ ಯಶೋಧಮ್ಮ ಬ್ರಾಹ್ಮಣರು ಎನ್ನುವುದು ನನಗೆ ನೀವು ಸೂಚಿಸಿದದ್ದರಿಂದ ಗೊತ್ತಾಗಿರುತ್ತದೆ. ನಾನು ವಾಸ ಮಾಡುತ್ತಿದ್ದ ಮನೆ ಮತ್ತು ದಾವಾ ಸ್ವತ್ತು ಖರೀದಿ ಮಾಡುವಾಗ ಒಂದೇ ಪ್ರದೇಶದಲ್ಲಿ ಇದ್ದವು. ಅವು ಸುಮಾರು 50 ರಿಂದ 7 ಮೀ ಅಂತರದಲ್ಲಿ ಇದ್ದವು. ನಾನು ವಾಸ ಮಾಡುತ್ತಿದ್ದೆ ಮತ್ತು ಖರೀದಿ ಮಾಡಿರುತ್ತೇನೆ ಎನ್ನುವ ಸಮಯಕ್ಕೆ ಸದರಿ ಪ್ರದೇಶ ಅಷ್ಟೊಂದು ಅಭಿವೃದ್ಧಿ ಆಗಿರಲಿಲ್ಲ ಎನ್ನುವುದು ಸರಿ ಇದೆ. ಆದ ಕಾರಣ ಸದರಿ ಪ್ರದೇಶದ ಎಲ್ಲಾ ವಿವರಗಳು ಗೊತ್ತಾಗುತ್ತಿತ್ತು ಎಂದರೇ ನಾನು ಕೆಲಸಕ್ಕೆ ಬೆಂಗಳೂರಿಗೆ ಬರುತ್ತಿದ್ದರಿಂದ ಗೊತ್ತಾಗುತ್ತಿರಲಿಲ್ಲ.

ನಾನು ಖರೀದಿ ಮಾಡಿದ ಜಾಗದಲ್ಲಿ 27 ½ X 27 ½ ಅಳತೆಯ ಧ್ವಜ ಆಯಾ ನಾಡ ಕಪ್ಪು ಹಂಚಿನ ಮನೆ ಇತ್ತು. ಸದರಿ ಮನೆಯಲ್ಲಿ ಮೃತ ಶ್ರೀನಿವಾಸ ಮೂರ್ತಿಯವರ ಹೆಂಡತಿ ಮಕ್ಕಳು ವಾಸ ಇದ್ದರು ಎನ್ನುವುದು ಸರಿ ಅಲ್ಲ. ಕೇವಲ ಯಶೋದಮ್ಮ ಮಾತ್ರ ವಾಸ ಇದ್ದರು. ಮೃತ ಶ್ರೀನಿವಾಸ ಮೂರ್ತಿ ಮತ್ತು ಹೆಂಡತಿ ಮಕ್ಕಳು ಎಲ್ಲಿ ವಾಸ ಇದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ಕುರಿತು

ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ದಾವಾ ಸ್ವತ್ತು ಖರೀದಿ ಮಾಡುವುದಕ್ಕೆ ಮೊದಲು ಮತ್ತು ಆ ಸಮಯಕ್ಕೆ ಮೃತ ಶ್ರೀನಿವಾಸ ಮೂರ್ತಿ ಮತ್ತು ಹೆಂಡತಿ ಮಕ್ಕಳನ್ನು ನಾನು ಸಂಪರ್ಕಿಸಲು ಪ್ರಯತ್ನ ಮಾಡಿಲ್ಲ. ನನ್ನ ಜನ್ಮ ದಿನಾಂಕ 01.06.1963 ಇರುತ್ತದೆ.

ನಾನು ಕೊಂಡ ಸ್ವತ್ತಿನ ಒಟ್ಟು ಆಸ್ತಿ 100 X 40 ಅಡಿ ಇತ್ತು. ದಿನಾಂಕ 31.01.1948 ರಂದು ಯಶೋಧಮ್ಮ ಮತ್ತು ಅಲ್ಪ ವಯಸ್ಕ ಅವರ ಮಗ ಶ್ರೀನಿವಾಸ ಮೂರ್ತಿ ಮೇಲೆ ಹೇಳಿದ 100 X 40 ಅಡಿ ಆಸ್ತಿಯನ್ನು ಜಂಟಿಯಾಗಿ ಖರೀದಿಸಿದ್ದರು ಎನ್ನುವುದು ಸರಿ ಇದೆ. ದಿನಾಂಕ 31.01.1948 ಕ್ಕೆ ನಾನು ಹುಟ್ಟಿರಲಿಲ್ಲ ಎನ್ನುವುದು ಸರಿ ಇದೆ. ನಾನು ನೋಂದಾಣಿಧಿಕಾರಿ ಕಚೇರಿಯಲ್ಲಿನ ದಾಖಲೆ ಆಧಾರದ ಮೇಲೆ ಕೇವಲ ಯಶೋದಮ್ಮ ಕ್ರಯದ ಹಣ ಕೊಟ್ಟಿರುತ್ತಾರೆಂದು ಹೇಳುತ್ತಿದ್ದೇನೆ. ಕ್ರಯ ಪತ್ರದಲ್ಲಿ ಯಶೋಧಮ್ಮನೇ ಕ್ರಯದ ಹಣ ಕೊಟ್ಟಿರುವುದಾಗಿ ಬರೆದಿದೆ. ದಿನಾಂಕ 31.01.1948 ರ ಕ್ರಯ ಪತ್ರವನ್ನು ನಾನು ಹಾಜರು ಪಡಿಸಿಲ್ಲ. ಅದರ ಪ್ರತಿ ಪಡೆದು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಅಥವಾ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ.

ನಾನು ಸದರಿ ಕ್ರಯ ಪತ್ರದ ಸಂಗತಿಗಳನ್ನು ವಿಚಾರಣಾ ನ್ಯಾಯಾಲಯದ ಮುಂದೆ ಯಶೋದಮ್ಮ ನೀಡಿರುವ ಸಾಕ್ಷ್ಯದ ಆಧಾರದ ಮೇಲೆ ಹೇಳುತ್ತಿದ್ದೇನೆ. ನಾನು ನನ್ನ ಸ್ವಂತ ತಿಳುವಳಿಕೆ ಮೇಲೆ

ಹೇಳುತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಶಪಥ ಪತ್ರದಲ್ಲಿ ಯಶೋದಮ್ಮ ಸಾಕ್ಷ್ಯ ಹೇಳಿದ್ದರ ಮೇರೆಗೆ ಬರೆಸುತ್ತಿದ್ದೇನೆಂದು ಬರೆಸಿದ್ದೇನೆ ಅಥವಾ ಇಲ್ಲ ಎಂದು ನೆನಪಿಲ್ಲ. ಖರೀದಿ ಸಮಯಕ್ಕೆ ದಾವಾ ಸ್ವತ್ತಿನ ದಾಖಲೆಗಳನ್ನು ನಾನು ಪಡೆದಿದ್ದೆ ಅಥವಾ ಇಲ್ಲ ಎಂದು ನೆನಪಿಲ್ಲ. ಮೌಖಿಕವಾಗಿ ಕಾನೂನು ಅಭಿಪ್ರಾಯ ಕೇಳಿದ್ದೆ. ಯಶೋಧಮ್ಮ ಮತ್ತು ಅವರ ಸೊಸೆ ನಡುವೆ ದಾವಾ ಆಸ್ತಿ ಖರೀದಿ ಮಾಡಿರುತ್ತೇನೆ ಎನ್ನುವ ಸಮಯಕ್ಕೆ ವೈ ಮನಸ್ಸು ಇತ್ತು ಎನ್ನುವುದು ನನಗೆ ಗೊತ್ತಿಲ್ಲ.

ನಾನು ಅತ್ತೆ ಮತ್ತು ಸೊಸೆ ನಡುವಿನ ವೈ ಮನಸ್ಸು ದುರುಪಯೋಗ ಪಡಿಸಿಕೊಂಡು ಸೊಸೆ ಮತ್ತು ಮಕ್ಕಳನ್ನು ವಿಚಾರಿಸದೆ ದಾವಾ ಆಸ್ತಿ ಖರೀದಿ ಮಾಡಿದ್ದೇನೆ ಎನ್ನುವುದು ಸರಿ ಅಲ್ಲ. ದಾವಾ ಆಸ್ತಿ ಖರೀದಿ ಮಾಡಿರುತ್ತೇನೆ ಎಂದು ಹೇಳುವ ಸಮಯಕ್ಕೆ ಅದು ಯಶೋಧಮ್ಮ, ಅವರ ಸೊಸೆ ಮಕ್ಕಳು ವಾಸ ಮಾಡುತ್ತಿದ್ದ ಕಪ್ಪು ಹಂಚಿನ ಮನೆ ಆಗಿತ್ತು ಎಂದರೇ ಕೇವಲ ಯಶೋಧಮ್ಮ ಮಾತ್ರ ವಾಸ ಮಾಡುತ್ತಿದ್ದರು. ಈ ಮನೆ ಶ್ರೀನಿವಾಸ ಮೂರ್ತಿ ಮಕ್ಕಳು ಹುಟ್ಟಿ ಬೆಳೆದ ಮನೆ ಎನ್ನುವುದು ಸರಿ ಅಲ್ಲ. ಎಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀನಿವಾಸ ಮೂರ್ತಿ ಮೃತರಾಗುವಾಗ ದಾವಾ ಸ್ವತ್ತಿನ ಹಿಂದೆ ಇದ್ದ ಅವರ ಕಟ್ಟಿಕೊಂಡಿದ್ದ ಮನೆಯಲ್ಲಿ ವಾಸ ಇದ್ದರು ಎಂದು ಮಾತಾನಾಡಿಕೊಳ್ಳುತ್ತಿದ್ದರು. ಹೆಂಡತಿ ಮತ್ತು ಮಕ್ಕಳು ಕೂಡ ಅವರ

ಜೊತೆ ಇದ್ದರು ಎಂದು ಮಾತಾನಾಡಿಕೊಳ್ಳುತ್ತಿದ್ದರು. ನಾನು ದಾವಾ ಆಸ್ತಿ ಖರೀದಿ ಮಾಡಿದ ಸಮಯದಲ್ಲಿ ಅದರ ಹಿಂದಿನ ಮನೆಯಲ್ಲಿ ಶ್ರೀ ನಿವಾಸ ಮೂರ್ತಿಯವರ ಹೆಂಡತಿ ಮಕ್ಕಳು ವಾಸ ಇದ್ದರು.

**ಪಾಟೀ ಸವಾಲುಃ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದು ಮೂಂದೂಡಿರುತ್ತದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.